Paper of Mysore

ಸತ್ಯಾಗ್ರಹಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 31 ಸಂಚಿಕೆ 212] ಗುರುವಾರ 29—7—48 [ಬಿಡಿ ಪ್ರತಿ 3 ಪೈ

ಸ್ವಾಗತ

ಕನ್ನಡದಲ್ಲಿ ಬಿನ್ನವತ್ತಳೆ ಅರ್ಪಣೆ

ಪೌರಸಭೆಯಲ್ಲಿ ಏಕಮತ ತೀರ್ಮಾನ

ಮೈಸೂರು, ಜು 28 — ಭಾರತ ಗ| ಜ| ಹಿಸ್ ಎಕ್ಸೆಲೆನ್ಸಿ ಶ್ರೀ ಸಿ. ರಾಜಗೋಪಾಲಚಾರ್ಯರವರು ಮುಂದಿನ ತಿಂಗಳು ಮೈಸೂರು ನಗರಕ್ಕೆ ಭೇಟಿಕೊಡುವಾಗ ಪೌರಸಭೆ ಅವರಿಗೊಂದು ಬಿನ ವತ್ತಳೆ ಅರ್ಪಿಸುವ ಬಗೆಗೆ ವೈಭವಯುತವಾದ ಏರ್ಪಾಡು ಮಾಡಬೇಕು. ಪೌರಸಭೆ ಈ ಸಮಾರಂಭದ ವೆಚ್ಚಕ್ಕಾಗಿ ರೂ. 2000 ಮಂಜೂರು ಮಾಡಬೇಕು — ಎಂಬ ನಿರ್ಣಯಗಳು ಶ್ರೀ ಬಿ. ನಾರಾಯಣಸ್ವಾಮಿಯವರಿಂದ ಈ ದಿನ ಮಧ್ಯಾಹ್ನ ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ಸೇರಿದ್ದ ಪೌರಸಭೆಯ ವಿಶೇಷಾಧಿವೇಶನದಲ್ಲಿ ಮಂಡಿಸಲ್ಪಟ್ಟು ಸರ್ವಾನುಮತದಿಂದ ಅಂಗೀಕೃತವಾಯಿತು.

ಸಭೆಯು ಮುಂದೆ ನಿರ್ಣಯವನ್ನು ಮಂಡಿಸುತ್ತಾ ಶ್ರೀ ಬಿ. ನಾರಾಯಣಸ್ವಾಮಿಯವರು: ಶ್ರೀ ಸಿ ರಾಜಗೋಪಾಲಚಾರ್ಯರು ಪ್ರಪ್ರಥಮ ಭಾರತೀಯ ಗವರ್ನರ್ ಜನರಲ್. ಹಿಂದಿನ ಗವರ್ನರ್ ಜನರಲ್‌ರವರಿಗೆ ಎಷ್ಟು ವೈಭವಯುತವಾಗಿ ಸ್ವಾಗತವಿತ್ತೆವೋ ಅದೇ ಸ್ವಾಗತವನ್ನಾಗಲೂ ತೋರಬೇಕು. ಅಧಿಕಾರಿಗಳು ಆಗಮಿಸುವಾಗ ಸರ್ಕಾರ ಯಾವ ರೀತಿ ಪೌರಸಭೆಗೆ ದ್ರವ್ಯ ಕೊಡುತ್ತಿದ್ದಿತೋ ಹಾಗೆಯೇ ಈಗಲೂ ಕೊಡಬೇಕೆಂದು ಪ್ರಾರ್ಥನೆ ರೂ 30000 ಕೊಡಬೇಕೆಂದು ಕೋರೋಣ ಎಂದರು.

ಶ್ರೀ ಬಿ ನಾರಾಯಣಸ್ವಾಮಿಯವರ ನಿರ್ಣಯವನ್ನು ಅನುಮೋದಿಸುತ್ತಾ ಶ್ರೀ ಪಿ ಗೋಪಾಲಕೃಷ್ಣಶೆಟ್ಟಿಯವರು ಗಾಂಧೀಜೀ ಹುತಾತ್ಮರಾದ ವರ್ಷವಿದು ಆಗಸ್ಟ್ 15 ರ ದಿನ ಅದಷ್ಟು ಮಿತ ವೈಭವದಿಂದ ಸ್ವಾತಂತ್ರ್ಯೋತ್ಸವ ಜರುಗಿಸಬೇಕೆಂದು ಪ್ರಧಾನಿ ಪಂ|| ನೆಹರು ಮನವಿ ಮಾಡಿದ್ದಾರೆ ಶ್ರೀ ಸಿ ರಾಜಗೋಪಾಲಚಾರ್ಯರಿಗೆ ಸುಸ್ವಾಗತ ಕೊಡುವ ಬಗ್ಗೆ ಮಿತಿಯನ್ನಿಟ್ಟುಕೊಂಡು ಕಾರ್ಯ ನಡಿಸೋಣ ಈ ಕಾರ್ಯಕ್ರಮಗಳನ್ನು ಪರ್ಷಡಿಸಲು ಒಂದು ಉಪ ಸಮಿತಿ ರಚಿಸೋಣ ಎಂದರು

ನಿರ್ಣಯವನ್ನು ಅಂಗೀಕರಿಸುತ್ತಾ ಶ್ರೀ ಎಂ ವೆಂಕಟೇಶಯ್ಯನವರು: ಶ್ರೀ ಸಿ. ರಾಜಗೋಪಾಲಚಾರ್ಯರಿಗೆ, ಚಕ್ರವರ್ತಿ-ರಾಜ ಗೋಪಾಲ ಎಲ್ಲ ಅನ್ವರ್ಥ ವಾಗಿ ಹೋಗಿವೆ. ರಾಜ ಮರ್ಯಾದೆಗೆ ತಕ್ಕ ಸುಸ್ವಾಗತ ಅವರಿಗೆ ದೊರೆಯಬೇಕು. ಅದಿನ ಸರ್ಕಾರ ರಜಾ ಕೊಡಬೇಕು. ಮೈಸೂರಿನ ಧವಳಕೀರ್ತಿಯನ್ನೂ, ನಗರ ಸೌಂದರ್ಯವನ್ನೂ ಅವರಿಗೆ ಕಾಣಿಸಬೇಕು, ಎಂದರು.

ಶ್ರೀ ಸಿ. ರಾಜಗೋಪಾಲಚಾರ್ಯರವರಿಗೆ, ರಾಜವೈಭವ ಸ್ವಾಗತವೀಯುವ ಬಗ್ಗೆ ಈ ಕೆಳಗೆ ಕಾಣಿಸಿರುವ ಮಾನ್ಯ ಸದಸ್ಯರುಗಳನ್ನೊಳಗೊಂಡ ಒಂದು ಉಪ ಸಮಿತಿ ರಚಿಸಲು ಸಭೆ ಒಪ್ಪಿತು—

(1) ಶ್ರೀ ಪಾ ಸೀತಾರಾಮಯ್ಯ. (ಅಧ್ಯಕ್ಷರು)

(2) ಶ್ರೀ ಇ. ಪಿ. ನಂಜಪ್ಪ (ಉಪಾಧ್ಯಕ್ಷರು).

(3) ಶ್ರೀ. ಬಿ ನಾರಾಯಣಸ್ವಾಮಿ.

(4) ಶ್ರೀ ಡಬ್ಲ್ಯೂ. ಹೆಚ್. ಥಿಯೋಬಾಲ್ಡ್.

ಶ್ರೀ ಸಿ. ರಾಜಗೋಪಾಲಚಾರ್ಯರಿಗೆ ಕನ್ನಡ ಭಾಷೆಯಲ್ಲಿಯೇ ಬಿನ್ನವತ್ತಳೆ ಅರ್ಪಿಸಬೇಕೆಂದು ಮಾನ್ಯ ಸದಸ್ಯರುಗಳು ಸೂಚಿತಾಭಿಪ್ರಾಯವಿತ್ತರು.

ವುಡ್‌ಲ್ಯಾಂಡ್ಸ್

26—7—48 ರಿಂದ

ಹುಸ್ನಬಾನೊ — ಯಿಶ್ವಂತ ದಾವೆ

ಪಾತ್ರವಹಿಸಿರುವ

ರಾಯಲ್ ಮೋಲ್

[ನೋಡಲೇಜೇಕಾದ ಹಿಂದಿ ಚಿತ್ರ]

ಪ್ರತಿದಿನ 3 ಆಟಗಳು

ಹೈದರಾಬಾದಿನ ಮೇಲೆ ದಂಡಯಾತ್ರೆ ನಡಿಸಿ

ಮದರಾಸ್, ಜು 28—ಮೈಸೂರು ಕರ್ನಾಟಕ ಆಂಧ್ರ ಮತ್ತು ತಮಿಳುನಾಡು ಕಾಂಗ್ರೆಸ್ ಅಧ್ಯಕ್ಷರುಗಳ, ಕಾರ್ಯದರ್ಶಿಗಳ ಮತ್ತು ಇತರ ಅಧಿಕಾರಿಗಳ ಸಮ್ಮೇಳನ ಅದಷ್ಟು ಜಾಗ್ರತೆ ಹೈದರಾಬಾದ್ ಮೇಲೆ ಭಾರತ ಸರ್ಕಾರ ಸೇನಾ ಕಾರ್ಯಾಚರಣೆ ಕೈಗೊಂಡು ಪ್ರಜಾರಾಜ್ಯ ಸ್ಥಾಪಿಸಬೇಕೆಂದು ನಿರ್ಣಯಿಸಿದೆ ಪ್ರಸಕ್ತ ಪರಿಸ್ಥಿತಿಯಲ್ಲಿ ಹೈದರಾಬಾದನ್ನು ಹೀಗೆ ಬಿಡುವುದು ಭಾರತ ಸುರಕ್ಷತೆಗೆ ಅಪಾಯಕರ ಎಂದು ನಿರ್ಧರಿಸಲಾಗಿದೆ

ಪ್ರತಿಭಟನಾ ಸಭೆ

ಲಂಡನ್ ಹೈಡ್ ಪಾರ್ಕಿನಲ್ಲಿ ಶನಿವಾರ ಭಾರತ ಯೂನಿಯನ್ನಿಗೆ ಯಾವ ಷರತ್ತು ಇಲ್ಲದೆ ಹೈದರಾಬಾದ್ ಶರಣಾಗತವಾಗಬೇಕು ಎಂಬುದರ ವಿರುದ್ಧ ಸೇರುವ ಪ್ರತಿಭಟನಾ ಸಭೆಗೆ ಬ್ರಿಟೀಷ್ ಸಾರ್ವಜನಿಕರು ಬರಬೇಕೆಂದು ಚೀಟಿ ಹಚ್ಚಲಾಗಿದೆ ಹೈದರಾಬಾದನ್ನು ಪ್ರಶಂಸಿಸಿ ಆ ಚೀಟಿಗಳಲ್ಲಿ ಬರೆಯಲಾಗಿದೆ

ಮಾಂಕ್ಟನ್ ಅಭಿಪ್ರಾಯ

ಲಂಡನ್, ಜು 27—ಬ್ರಿಟಿಷ್ ಅಥವಾ ಬ್ರಿಟಿಷ್ ಕಾಮನ್‌ವೆಲ್ತ್ ಹೈದರಾಬಾದ್—ಇಂಡಿಯಾ ಬಗ್ಗೆ ಮಧ್ಯಸ್ಥಿಕೆ ವಹಿಸದಿದ್ದರೆ, ವಿಶ್ವಸಂಸ್ಥೆಗೆ ಮನವಿ ಮಾಡಿಕೊಳ್ಳದೇ ನಿಜಾಂರಿಗೆ ಬೇರೆ ದಾರಿಯೇ ಇಲ್ಲ ಎಂದು ಸರ್ ಮಾಂಕ್ಟನ್ನರ ಅಭಿಪ್ರಾಯವೆಂದು ನಂಬಲಾಗಿದೆ

ಜೈಪ್ರಕಾಶರ ತಂತಿ

ರೈಲ್ವೆ ಕಾರ್ಮಿಕರೆಲ್ಲರನ್ನೂ ಖುಲಾಸೆ ಮಾಡಬೇಕೆಂದು ಅಖಿಲ ಭಾರತ ಸಮತಾವಾದಿ ಪಕ್ಷದ ಪ್ರಧಾನ ಕಾರ್ಯದರ್ಶಿ ಶ್ರೀ ಜೈಪ್ರಕಾಶ್ ನಾರಾಯಣ್ ಮೈಸೂರು ಸರ್ಕಾರಕ್ಕೆ ತಂತಿ ಕಳಿಸಿದ್ದಾರೆ ಈ ಬಗ್ಗೆ ಸಂಧಾನ ನಡೆಸಲು ಆಗಸ್ಟ್ ೭೦ಲಿ ಬೊಂಬಾಯಿ

ಮೈಸೂ
ಕ ಸಚಿವರು
ಟ್ಟ ಶಿಷ್ಯರು
ಸಿ. ದಾಸಪ್ಪ
ತ್ರಿ ಸದಕ್ಕೆ ರಾ
ಡುವರೆಂದು ತಿಳಿ

ಮುಂತ್ರಿವರ್ಯರು
ತ್ತೀಚಿಗೆ ಗಾಂಧೀಜಿ
ವಾಗಿ ನನ್ತಂತೆಯೇ ಗಿ
ಜಾತಿ ಮತ ಐಕ್ಯತೆಗಾಗಿ
ಯಬೇಕು. ಅಶ್ರಮ ಚಟು
ಜರುಗಿಸಬೇಕು ಎಂದು ಅ
ಇತ್ತರು ಎಂದು ಪದಂತಿ !

ಶ್ರೀ ದಾಸಪ್ಪನವರು ಈ
ಪ್ಪಣೆಯನ್ನು ಅಂಗೀಕರಿಸಿ ಶ
ನಾಡಿಯಲ್ಲಿ ಆಶ್ರಮ ತೆರೆ
ವುದಾಗಿ ವದಂತಿ !

ಶ್ರೀ ದಾಸಪ್ಪನವರನ್ನು ಮೈ
ಸೂರಿನ ಗಾಂಧೀಜೀ ಎಂದರೆ ಅ
ತಿಶಯವಲ್ಲ !

ಬೆಂಗಳೂರಿನಲ್ಲಿ ಟೆಲಿಫೋನ್ ಖರ್ಖಾನೆ ನಿರ್ಮಾಣ ಸಂಬಂಧದಲ್ಲಿ ಕೇಂದ್ರ ಸರ್ಕಾರದ ಮಂತ್ರಿ ರಫಿ ಅಹ್ಮದ್ ಕಿದ್ವಾಯಿ ಬೆಂಗಳೂರಿಗೆ ಮುಂದಿನ ತಿಂಗಳು ಪ್ರಥಮವಾಗಿ ಬರುವರು

ಮೈಸೂರು ಸಂಸ್ಥಾನ ಕಾಂಗ್ರೆಸ್ ಅಖಿಲಭಾರತ ಕಾಂಗ್ರೆಸ್ಸಿನಲ್ಲಿ ಐಕ್ಯಗೊಳ್ಳಬೇಕೆಂದು ಬೆಂಗಳೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಒತ್ತಾಯ ಪಡಿಸಿದೆ.

ಬೆಂಗಳೂರು ಬಳಿಯಿರುವ ಹೆಸರಘಟ್ಟದಲ್ಲಿ ಭಾರತ ನೌಕಾ ಪಡೆ ಇಲಾಖೆಯವರು ನೌಕಾಶಿಕ್ಷಣ ಕೇಂದ್ರ ತೆರೆಯುವರೆಂದು ಗೊತ್ತಾಗಿದೆ

ಪೋರ್ಚುಗೀಸ್ ರಾಜ್ಯ ಗೋವಾದಲ್ಲಿ ಪಾಕೇಸ್ತಾನದಿಂದ ಹೈದರಾಬಾದಿಗೆ ಹಾರಿದ್ದ ಸಿಡ್ನಿ ಕಾರ್ಟರ್ ಇಳಿದಿದ್ದನು

ಶ್ರೀಮನ್ಮಹಾರಾಜರ ವರ್ಧಂತ್ಯುತ್ಸವ ಸಂಸ್ಥಾನಾಧ್ಯಂತ ವೈಭವದಿಂದ ಜರುಗಿತು

Woodlands

30—7—48 ರಿಂ

— ಬೆಳಗಿನ ಪ್ರದರ್ಶನ —

STAR OF ASI

ಮಾಸ್ಟರ್ ವಿಠಲ್ ಜನಾ

ಪವಾರ್ ಪಾತ್ರವಹಿ

ಸ್ಟಾರ್ ಆಫ್

...ಳು

...ರು ಜುಲೈ 28

...ವರು ತಮ್ಮ
ಸಂದರ್ಭದಲ್ಲಿ ಈ
ಸಂಟಪದಲ್ಲಿ ನಡೆಸಿದ
ಮುಂದೆ ಕಂಡ ಮಹ
ಬಿರುದುಗಳನ್ನು ದಯ

ಜಮಂತ್ರ ಚಿಂತಾಮಣಿ

ಆರ್ಕಾಟ್ ರಾಮಸ್ವಾಮಿ
ಯಾರ್

ಧರ್ಮಪ್ರಕಾಶ

ಶ್ರೀ ಏ ಎಸ್. ತಿರುವೆಂಗಡಂ
ಯ ಮೊದಲಿಯಾರ್.

ಶ್ರೀ ಮುರುಗಪ್ಪ ಚಿಗಟೇರಿ. ದಾವಣ
.

ಶ್ರೀ ಎಸ್. ದಾಸಪ್ಪ, ಬೆಂಗಳೂರು.

ಧರ್ಮಪ್ರವರ್ತ

ಶ್ರೀ ಭೂಸಾಳಂ ನಂಜುಂಡಯ್ಯ.
ಪದುರ್ಗ ಶ್ರೀ ಎ. ರಾಮಕೃಷ್ಣಯ್ಯಂ
, ಆನಂದಪುರ. ಶ್ರೀ ಜಿ. ಎಂ
ನಂಜಪ್ಪ, ಗುಬ್ಬಿ.

ರಾಜಸೇವಾಸಕ್ತ

ಶ್ರೀ ಡಿ. ಸಿ. ಸುಬ್ಬರಾಯಪ್ಪ, ಬೆಂಗ
ಳೂರು.

ಲೋಕಸೇವಾನಿರತ

ಶ್ರೀ. ಎ. ನಾರಾಯಣರಾವ್
ಮೈಸೂರು.

ಶ್ರೀ ಜಿ. ಎಂ. ಸಿದ್ದರಾಮಣ್ಣ
ಶುಮಕೂರು.

ಶ್ರೀ ಡಿ ಎಸ್. ಕೃಷ್ಣಯಶೆಟ್ಟಿ ಬೆಂಗ
ಳೂರು

ಧರ್ಮಪರಾಯಣೆ

ದೇವಿಸಾಕಮ್ಮ, ಮೈಸೂರು.

ಪಂಡಿತರತ್ನ

ಸ್ಥಾನ ಮಹಾ ವಿದ್ವಾನ್ ಶ್ರೀ
ಶಾಸ್ತ್ರಿ, ಮೈಸೂರು.

ಶ್ರೀ ಡಿ. ವಾಸುದೇ

ಆ|| ಮೆ|| ವಿದ್ವಾನ್ ಶ್ರೀ ದಾಳಿ ನರ
ನರಸಿಂಹಭಟ್ಟ.

ಆ|| ಮ|| ವಿದ್ವಾನ್ ಶ್ರೀ ಎಂ.ಎಸ್
ವೆಂಕಟೇಶ ಶಾಸ್ತ್ರಿ

ಆ||ಮ|| ವಿದ್ವಾನ್ ಶ್ರೀ ಟಿ. ಆರ್
ಶಿವ ಸುಬ್ರಹ್ಮಣ್ಯ ಶಾಸ್ತ್ರಿ.

ಜ್ಯೋತಿಷ್ಯ ರತ್ನಂ

ಆ|| ಮ|| ವಿದ್ವಾನ್ ಶ್ರೀ ಟಿ ಎ.
ನರಸಿಂಹಾಚಾರ್ಯ

ಸಂಗೀತ ಶಾಸ್ತ್ರವಿಶಾರದ
ಶ್ರೀ ಹಲಗೂರು ಕೃಷ್ಣಮಾಚಾರ್.

ಮೈಸೂರು ಸಿಟಿ ರೇಷನಿಂಗ್

No. R 6 - 81 / 48

1948 ನೇ ಇಸವಿ ಜುಲೈ ಮಾಹೆ 31 ನೇ ತಾ|| ದಿವಸ ಮೈಸೂರು ಸಿಟಿ ಯಲ್ಲಿರುವ ಎಲ್ಲಾ ಸರ್ಕಾರಿ ಡಿಪೋ ಮೊಹಲ್ಲಾ ಸಬ್ ಗೋಡೌನ್ ವರ್ತಕರ ಡಿಪೊ ಮತ್ತು ಸಹಕಾರ ಸಂಘಗಳಲ್ಲಿರುವ ದಿನಸಿಗಳ ಎಣಿಕೆ ಮಾಡಬೇಕಾಗಿರುವುದರಿಂದ ಆ ದಿವಸ ಡಿಪೋಗಳು ಮುಚ್ಚಲ್ಪಡುತ್ತವೆ.

(ಸಹಿ) ಎಂ. ಶ್ರೀನಿವಾಸಲು ನಾಯುಡು
ರೇಷನಿಂಗ್ ಆಫೀಸರ್

22-7-48 ಮೈಸೂರು ಸಿಟಿ

At Opera

24-7-48 ರಿಂದ

ಕೆ ಸ್ಮ್ರತ್ ವಾ ಲಿ

[ಹಿಂದಿ]

ನಾದಿಯ ಜಾಕ್ ಕವಾಸ್ ಸಯಾನಿ
ರಾನಿಬಾಲ ಪಾತ್ರವಹಿಸಿರುವರು

.... ಪ್ರತಿದಿನ 3 ಆಟಗಳು ....

Morning Shows from 30-7-48

DOLL FACE

Change of Premises

ಆ ಫೀ ಸ್ ಬ ದ ಲಾ ವ ಣೆ

ರಾಜಧಾನಿಯ ಜಗನ್ಮೋಹನ ಬಂಗ್ಲೆ ಬೀದಿಯಲ್ಲಿದ್ದ ಅ ಡ್ವೊ ಕೇ ಟ್ ಬಿ. ಎ ಕೃಷ್ಣಸ್ವಾಮಯ್ಯಂಗಾರ್ಯರವರ ಆಫೀಸು, ವಾಣೀವಿಲಾಸ ಮಾರ್ಕೆಟ್ ಎದುರು ಶ್ರೀ ಶಾಮರಾಯರ ಮಹಡಿ ಮೇಲಕ್ಕೆ ಬದಲಾಯಿಸಿರುತ್ತೆ.

Edited, Printed and Published by M S Krishna Rao at the ... Press, ... raj

ಮುಪ್ಪಿನ ಕಾಲದ ಬಡತನ—
ಆಶ್ರಿತರ ರಕ್ಷಣೆಯ ಚಿಂತೆ—

ಈ ಸ್ವಾಭಾವಿಕ ಶತ್ರುಗಳ ಮೇಲೆ ವಿಜಯಪಡೆಯಲು ಅಪ್ರತಿಮ ಸಾಧನವು

ಜೀವವಿಮೆಯೊಂದೇ

ಆದುದರಿಂದ ಇಂದೇ

ಮೈಸೂರು ಸರಕಾರದ ವಿಮಾ ಇಲಾಖೆಯ ಪ್ರಜೆಗಳ ಶಾಖೆಯಲ್ಲಿ

ವಿಮೆ ಮಾಡಿರಿ

SHAKTI

SUDHA

A Superb TONIC

ಹೊಸ ಬೆಳೆಯ, ಆರಿಸಿ ತೆಗೆದ, ಪರಿಶುದ್ಧವಾದ

ಶ್ರೀ 'ಓಂ' ಗುರುತಿನ ಕೇಸರಿ

ಈ ಓಂ ಗುರುತಿನ ಕೇಸರಿ ಅತಿ ಪರಿಶುದ್ಧವಾದುದಕ್ಕೆ ಗ್ಯಾರಂಟಿಯಾದುದು. ಸ್ಪೇನಿನ ಕೇಸರಿ ಗಿಡಗಳಲ್ಲಿಯ ಹೂಗಳಿಂದ ಆರಿಸಿ ತೆಗೆದುದಾಗಿದೆ. ನಮ್ಮಿಂದ ಸ್ಪೆಷಲ್ಲಾಗಿ ಆಮದು ಮಾಡಲ್ಪಟ್ಟಿರತಕ್ಕದ್ದು. ಬಹು ಹೊಳಪಿನಿಂದಲೂ ಸುವಾಸನೆಯಿಂದಲೂ ಕೂಡಿದುದಾಗಿದೆ. ಏನೊಂದೂ ಅಕ್ಷೇಪಣೀಯ ಪದಾರ್ಥಗಳೂ ಸೇರಿಲ್ಲ, ಮತ್ತು ಧಾರ್ಮಿಕವಾಗಿ ಪರಿಶುದ್ಧವಾಗಿದೆ. ದೇವಸ್ಥಾನಗಳಲ್ಲಿಯೂ, ದೇವರ ಪೂಜೆಗೂ, ಔಷಧಗಳಿಗೂ, ಮತ್ತು ತಿಂಡಿಪದಾರ್ಥಗಳಿಗೂ ಉಪಯೋಗಿಸಲ್ಪಡಲು ಅರ್ಹವಾಗಿದೆಯೆಂದು ಶಿಫಾರಸ್ಸುಮಾಡಲಾಗಿದೆ. ½ ತೋಲಾ, 1 ತೋಲಾ, 5 ತೋಲಾ, ಡಬ್ಬಗಳಲ್ಲಿಯೂ, ಚಿಲ್ಲರೆಯಾಗಿಯೂ ದೊರೆಯುತ್ತದೆ. ಉಪಯೋಗಿಸಬೇಕಾಗಿ ವಿನಂತಿ

ವಲ್ಲಭದಾಸ್ ತೇಜ್‌ಪಾಲ್

೧೪ ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.